ಶ್ರೀ ಎನ್. ಯೋಗೀಶ್ ಭಟ್:– ಭಾರತದ ಎಲ್ಲ ಭಾಷೆಗಳಲ್ಲಿಯೂ ಮಾತ ನಾಡಬಹುದಲ್ಲವೆ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸದಸ್ಯರು ಅಲ್ಲಿ ನಿಂತು ಮಾತನಾಡುವ ಅಧಿಕಾರ ಇಲ್ಲವಲ್ಲ?

ಶ್ರೀ ಬಿ. ಶಿವರಾಮು (ಗಂಡಸಿ) ಕನ್ನಡ

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರ್ಕಿಹೊಳಿ (ಅರಭಾವಿ) ಕನ್ನಡ

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ ನೂರಾರು ಜನರಿಗೆ ಸದಸ್ಯರು ಗ್ಯಾಲರಿಗೆ ಹೋಗಲು ಪಾಸ್‌ಗಳನ್ನು ಕೊಟ್ಟಿದ್ದಾರೆ. ಆದರೆ ಮಾರ್ಷಲ್ ಬಿಡುತ್ತಿಲ್ಲ. ಇದರಿಂದ ಗೊಂದಲವಾಗುತ್ತಿದೆ. ತಾವು ದಯವಿಟ್ಟು ಅವರಿಗೆ ನಿರ್ದೇಶನ ನೀಡಬೇಕು.

ಹಂಗಾಮಿ ಅಧ್ಯಕ್ಷರು:– ಗೌರವಾನ್ವಿತ ಸದಸ್ಯರು ಯಾರಿಗೆ ಪಾಸ್‌ಗಳನ್ನು ಕೊಟ್ಟಿದ್ದಾರೆ ಅವರನ್ನು ಗ್ಯಾಲರಿಗೆ ಬಿಡಲು ಹೇಳಿ.

12.00 ಪಿಎಂ

ಹಂಗಾಮಿ ಅಧ್ಯಕ್ಷರು:– ಸಭೆಯ ಮುಂದಿರುವ ಎರಡನೆಯ ವಿಷಯ ಏನೆಂದರೆ ಈ ಮನೆಯ ಗೌರವಾನ್ವಿತ ಅಧ್ಯಕ್ಷರ ಚುನಾವಣೆ. ಮಾನ್ಯ ಶ್ರೀ ಕೃಷ್ಣರವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಧರ್ಮಸಿಂಗ್ ರವರು ಸೂಚಿಸುವುದು ಹಾಗೂ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸುವುದು.

2. ಅಧ್ಯಕ್ಷರ ಚುನಾವಣೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು):– ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಅವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸ ಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಸಾರಿಗೆ ಸಚಿವರು):– ಮಾನ್ಯ ಅಧ್ಯಕ್ಷರೆ, "ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವ ಈ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಹಂಗಾಮಿ ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಯವರಾದ ಧರ್ಮಸಿಂಗ್ ರವರು ಸೂಚಿಸಿರುವ ಹಾಗೂ ಮಾನ್ಯ ಜಲಸಂಪನ್ಮೂಲ ಸಾರಿಗೆ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

" ಶ್ರೀ ಕೃಷ್ಣರವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು." ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಕೃಷ್ಣ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

108-6 **+ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):**– ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಏನು ನೂತನ ಸದಸ್ಯರುಗಳು ಆರಿಸಿ ಬಂದಿದ್ದಾರೆ, ಅವರು ತಮ್ಮನ್ನು ಬಹಳ ಸಂತೋಷದಿಂದ